**DREAM WORLD SCHOOL, BALLARI, KARNATAKA**

*'The School that Learns'*

**ತರಗತಿ: ೫**

## ಸಾರಾಂಶಿಕರಿಸುವುದು

**ಪೀಠಿಕೆ:**

ವಿದ್ಯಾರ್ಥಿ ಓದಿದ್ದನ್ನು ಗ್ರಹಿಸುವುದು ಮತ್ತು ಅದನ್ನು ಬರವಣಿಗೆಯಲ್ಲಿ ಸ್ಪಷ್ಟವಾಗಿ ವ್ಯಕ್ತಪಡಿಸುವುದು ಅತಿ ಮುಖ್ಯವಾಗಿರುತ್ತದೆ. ಹೀಗೆ ಗ್ರಹಿಸುವಲ್ಲಿ, ವ್ಯಕ್ತಪಡಿಸುವಲ್ಲಿ, ಅರ್ಥವತ್ತಾದ ಪದಗಳ ಪರಿಚಯ ಮಾಡಿಕೊಳ್ಳುವ ಅವಶ್ಯಕತೆ ಇದೆ. ಓದಿದ್ದನ್ನು ನಿಗಧಿತ ಪದಗಳಲ್ಲಿ ಅರ್ಥಸಹಿತವಾಗಿ ಸ್ಪಷ್ಟಪಡಿಸಬೇಕಾಗಿರುವ ಕಲೆಯನ್ನು ತಿಳಿಯುವುದರ ಅವಶ್ಯಕತೆ ಇದೆ. ಇದರಿಂದ ವಿದ್ಯಾರ್ಥಿಗಳ ವಿಷಯ ಗ್ರಹಿಕೆಯ ಸಾಮರ್ಥ್ಯ ಹೆಚ್ಚುತ್ತದೆ.

**ಅರ್ಥ:**

ಸಾರಾಂಶ ಎಂದರೆ ವಿಷಯದ ಮುಖ್ಯ ತಿರುಳು ಅಥವಾ ಸಾರವನ್ನು ಸಾಧ್ಯವಾದಷ್ಟೂ **ಕೆಲವು** ಪದಗಳಲ್ಲಿ ವ್ಯಕ್ತಪಡಿಸುವುದು. ಹಾಗೆ ವ್ಯಕ್ತಪಡಿಸುವಾಗ ವಿಷಯಕ್ಕೆ ಭಂಗಬಾರದಂತೆ ಅಗತ್ಯವಾದ ಎಲ್ಲ ಅಂಶಗಳನ್ನು ಒಳಗೊಂಡಿರುವಂತೆ ಬರೆಯಬೇಕು. ಇಷ್ಟೇ ದೀರ್ಘವಾಗಿರಬೇಕು ಎಂಬ ನಿಯಮವಿಲ್ಲದಿದ್ದರೂ ಮೂಲ ಪತ್ಯಕ್ಕಿಂತ **ಮೂರನೇ ಒಂದು ಭಾಗದಷ್ಟಿರಬೇಕು.**

**ಸಾರಾಂಶ ಬರವಣಿಗೆಯಲ್ಲಿ ಅನುಸರಿಸಬೇಕಾದ ವಿಧಾನಗಳು/ ಹಂತಗಳು:**

೧. ಗಮನವಿಟ್ಟು ಓದುವುದರ ಜೊತೆಗೆ ಕಥಾದೃಷ್ಟಿಯಿಂದ ಮುಖ್ಯವಾದ ಅರ್ಥವನ್ನು ಗ್ರಹಿಸಬೇಕು.

೨. ಸಾಧ್ಯವಾದಷ್ಟು ಎಲ್ಲಾ ವಾಕ್ಯಗಳ, ಪದಗಳ ಅರ್ಥವನ್ನು ಗ್ರಹಿಸಲು ಪ್ರಯತ್ನಿಸಬೇಕು.

೩. ಪ್ರತಿಯೊಂದು ಆಕಲನ(paragraph) ದ ಮುಖ್ಯ ಅಂಶಗಳನ್ನು ಒಂದು/ಎರಡು ವಾಕ್ಯಗಳಲ್ಲಿ ಬರೆಯುವುದು.

೪. ಸೂಚಿಸಲಾಗಿರುವ ಪದಗಳ ಸಂಖ್ಯೆಗನುಗುಣವಾಗಿ ಸಂಕ್ಷಿಪ್ತವಾಗಿ ಮುಖ್ಯ ಅಂಶಗಳನ್ನು ಬರೆದಿಟ್ಟುಕೊಳ್ಳುವುದು.

೫. ಬರೆದಿಟ್ಟುಕೊಂಡ ಮುಖ್ಯ ಅಂಶಗಳು ಪುನರಾವರ್ತಿತವಾಗದಂತೆ ಕ್ರಮಬದ್ಧವಾಗಿ ಆಕಲನಗಳಲ್ಲಿ (paragraph) ಜೋಡಿಸಬೇಕು.

೬. ಬರೆಯುವ ವಿಷಯವು ಪೂರ್ಣಸಂದೇಶವನ್ನು ಕೊಡುವಂತಿದ್ದು, ಅರ್ಥವತ್ತಾಗಿರಬೇಕು.

೭. ಸಾರ ಅಥವಾ ತಿರುಳನ್ನು ವ್ಯಕ್ತಪಡಿಸುವುದರ ಜೊತೆಗೆ ಕ್ರಮಬದ್ಧವಾಗಿ ಓದುವಂತೆ ವಿಷಯ ಜೋಡಣೆಯಾಗಿರಬೇಕು.

೮. ಓದಿದ ಕಥೆಗೆ ಸರಿಹೊಂದುವಂತೆ ನಿಮ್ಮ ಅಭಿಪ್ರಾಯದಲ್ಲಿ ಶೀರ್ಷಿಕೆ ಬರೆಯಬೇಕು.

# ಅರ್ಜುನ

| | |
|---|---|
| **ತಂದೆ'ಇನ್ನಿಲ್ಲ,<br>ನಿನ್ನಂಥ ಬಿಲ್ಲಾಳು ಇನ್ನೊಬ್ಬನಿಲ್ಲ,<br>ಇದೇ ಗುರುದಕ್ಷಿಣೆ,<br>ರಾಜಸೂಯ ನಡೆಯಿತು** | • ಅರ್ಜುನನು ಕುಂತಿಯ ಮೂರನೆ ಮಗುವಾಗಿ ಜನಿಸಿದನು.<br>• ದ್ರೋಣಾಚಾರ್ಯರ ಶಿಷ್ಯನಾಗಿ ಶಸ್ತ್ರಾಸ್ತ್ರ ವಿದ್ಯೆಗಳನ್ನು ಕಲಿತು, ಅಚ್ಚುಮೆಚ್ಚಿನ ಶಿಷ್ಯನಾಗುತ್ತಾನೆ.<br>• ಅರ್ಜುನನು ಹಸ್ತಿನಾಪುರವನ್ನು ಇಡೀ ಭಾರತದ ಕೇಂದ್ರಬಿಂದುವನ್ನಾಗಿ ಮಾಡಿದನು.<br>• ಪಾಂಡವರಿಂದ ರಾಜಸೂಯ ಯಾಗ ಮುಗಿಯುತ್ತದೆ. |
| **ರಾಜ್ಯದಿಂದ ಕಾಡಿಗೆ,<br>ಗಂಡೂ ಅಲ್ಲ; ಹೆಣ್ಣೂ ಅಲ್ಲ,** | • ಯುಧಿಷ್ಠಿರ ಸಾಮ್ರಾಜ್ಯವನ್ನು ಜೂಜಿನಲ್ಲಿ ಸೋತನು.<br>• ಪಾಂಡವರು ೧೨ ವರ್ಷ ವನವಾಸ ಮತ್ತು ೧ ವರ್ಷ ಅಜ್ಞಾತವಾಸವನ್ನು ಮಾಡುತ್ತಾರೆ.<br>• ವಿರಾಟ ರಾಜನ ಆಸ್ಥಾನದಲ್ಲಿ "ಬೃಹನ್ನಳೆ" ವೇಷಧರಿಸಿ ಅಂತ:ಪುರ ಸೇರಿಕೊಳ್ಳುತ್ತಾನೆ.<br>• ಉತ್ತರಕುಮಾರನಿಗೆ ಸಾರಥಿಯಾಗಿ ಹೋಗಿ, ತಾನೇ ಯುದ್ಧ ಮಾಡಿ ಗೋವುಗಳನ್ನು ಮರಳಿ ಪಡೆಯುತ್ತಾನೆ. |
| **ಜಗತ್ತಿನ ಮೊದಲ ಮಹಾಯುದ್ಧ,<br>ಸೂರ್ಯಪುತ್ರನಂತಿದ, ಯುದ್ಧ<br>ಮುಗಿದರೂ ಚಿಂತೆ ಬಿಡಲಿಲ್ಲ,<br>ಎರಡನೆಯ ದಿಗ್ವಿಜಯ** | • ದುರ್ಯೋಧನನು ರಾಜ್ಯವನ್ನು ಮರಳಿಸಲು ಒಪ್ಪದಿರುವುದರಿಂದ ಕುರುಕ್ಷೇತ್ರ ಯುದ್ಧ ಮಾಡಬೇಕಾಗಿ ಬಂತು.<br>• ಕೃಷ್ಣನೇ, ಅರ್ಜುನನ ರಥದ ಸಾರಥಿಯಾದ. ಯುದ್ಧದಲ್ಲಿ ಭೀಷ್ಮ, ದ್ರೋಣಚಾರ್ಯ, ಅಶ್ವತ್ಥಾಮ, ಜಯದ್ರಥ ಮತ್ತು ಕರ್ಣ ಮೊದಲಾದ ಕೌರವ ಸೇನೆಯ ಮಹಾವೀರರನ್ನು ಪಾಂಡವರು ಸೋಲಿಸಿ, ಜಯಗಳಿಸಿದರು.<br>• ಅಶ್ವಮೇಧಯಾಗ ಮಾಡಲು ಅರ್ಜುನ ೭೮ರ ವಯಸಿನಲ್ಲಿ ಸೇನಾಸಮೇತನಾಗಿ ಎರಡನೆ ಸಲ ದಿಗ್ವಿಜಯಕ್ಕೆ ಹೋಗುತ್ತಾನೆ.<br>• ಯುದ್ಧದಲ್ಲಿ ಮಗನಾದ ಬಬ್ರುವಾಹನನ ಕೈಯಲ್ಲಿ ಅರ್ಜುನನಿಗೆ ಸೋಲಾಗುತ್ತದೆ. |
| **ಉಪಸಂಹಾರ** | • ಪಾಂಡವರು ೩೬ ವರ್ಷಗಳ ಕಾಲ ರಾಜ್ಯವಾಳಿ, ಪರೀಕ್ಷಿತ್ ರಾಜನಿಗೆ ರಾಜ್ಯ ತ್ಯಾಗ ಮಾಡಿ, ದೇವತೆಗಳಾಗಿ ಸ್ವರ್ಗ ಸೇರಿದರು. |

**ಹಿಂದೂಧರ್ಮದ ಮಹಾಕಾವ್ಯಗಳಲ್ಲಿ ಮಹಾಭಾರತವೂ ಒಂದು. ಈ ಕಾವ್ಯದಲ್ಲಿ ಬರುವ ಪ್ರಮುಖ ಪಾತ್ರಗಳಲ್ಲಿ ಗುರುವಿಗೆ ಮೆಚ್ಚಿನ ಶಿಷ್ಯ, ಬಿಲ್ವಿದ್ಯೆ ಪ್ರವೀಣ, ಶ್ರೀಕೃಷ್ಣನಿಂದ ಗೀತೋಪದೇಶ ಪಡೆದ, ಮಧ್ಯಮ ಪಾಂಡವ ಎಂದೇ ಹೆಸರುವಾಸಿಯಾದ ಮಹಾನ್ ನಾಯಕ ಅರ್ಜುನ.** ಈತನು ಪಾಂಡುರಾಜ ಮತ್ತು ಕುಂತಿಗೆ ಮೂರನೆ ಮಗನಾಗಿ ಜನಿಸಿ, ಮುಂದೆ ಅಪ್ರತಿಮ ಬಿಲ್ಲಾಳುವಾದ ದ್ರೋಣಾಚಾರ್ಯರ ಬಳಿ ಶಸ್ತ್ರಾಸ್ತ್ರ ವಿದ್ಯೆಗಳನ್ನು ಕಲಿತು, ಗುರುವಿಗೆ ತಕ್ಕ ಶಿಷ್ಯನಾದನು.

ವಿದ್ಯಾಭ್ಯಾಸ ಮುಗಿದ ನಂತರ ಅರ್ಜುನ ದಿಗ್ವಿಜಯಕ್ಕೆ ಹೊರಟು, ದಕ್ಷಿಣ ಮತ್ತು ಉತ್ತರದ ಎಲ್ಲಾ ರಾಜರುಗಳನ್ನು ಸೋಲಿಸಿ, ಅವರಿಂದ ಅಪಾರವಾದ ಕಪ್ಪಕಾಣಿಕೆಗಳನ್ನು ಪಡೆದು ಹಸ್ತಿನಾಪುರವನ್ನು ಇಡೀ ಭಾರತದ ಕೇಂದ್ರಬಿಂದುವನ್ನಾಗಿ ಮಾಡಿ, ಅತ್ಯಂತ ವೈಭವದಿಂದ ರಾಜಸೂಯ ಯಾಗವನ್ನು ಪೂರ್ಣಗೊಳಿಸುತ್ತಾನೆ. ಹೀಗೆ ವಿಸ್ತರಿಸಿದ ಸಾಮ್ರಾಜ್ಯವನ್ನು ಯುಧಿಷ್ಠಿರ ಜೂಜಿನಲ್ಲಿ ಪಣವಿಟ್ಟು ದುರ್ಯೋಧನನೊಂದಿಗೆ ಸೋತ. ಅದರ ಪರಿಣಾಮವಾಗಿ, ೧೨ ವರ್ಷ ವನವಾಸ ಮುಗಿಸಿ, ನಂತರ ವಿರಾಟರಾಜನ ಆಸ್ಥಾನದಲ್ಲಿ "ಬೃಹನ್ನಳೆ"ಯಾಗಿ ಒಂದು ವರ್ಷ ಅಜ್ಞಾತವಾಸದಲ್ಲಿದ್ದ.

ಆ ಸಂದರ್ಭದಲ್ಲಿ ದುರ್ಯೋಧನ ವಿರಾಟರಾಜನ ಗೋವುಗಳನ್ನು ಅಪಹರಿಸಿದಾಗ, ಅವನ ಮಗ ಉತ್ತರಕುಮಾರನಿಗೆ ಸಾರಥಿಯಾಗಿ, ತಾನೇ ಯುದ್ಧ ಮಾಡಿ ಗೋವುಗಳನ್ನು ಮರಳಿ ಪಡೆಯುತ್ತಾನೆ. ಅಂದಿಗೆ ಅಜ್ಞಾತವಾಸವು ಮುಗಿಯುತ್ತದೆ. ಆದರೆ ದುರ್ಯೋಧನನು ರಾಜ್ಯವನ್ನು ಮರಳಿಸದ ಕಾರಣ, ಕುರುಕ್ಷೇತ್ರ ಯುದ್ಧ ಮಾಡುವ ಪ್ರಸಂಗ ಒದಗಿತು. ಆಗ ಪಾಂಡವರು ಶ್ರೀಕೃಷ್ಣನ ಸಾರಥ್ಯದಲ್ಲಿ ಭೀಷ್ಮ, ದ್ರೋಣಚಾರ್ಯ, ಅಶ್ವತ್ಥಾಮ, ಜಯದ್ರಥ ಮತ್ತು ಕರ್ಣ ಮೊದಲಾದ ಕೌರವ ಸೇನೆಯ ಮಹಾವೀರರನ್ನು ಸೋಲಿಸಿ, ಜಯಗಳಿಸಿದರು.

ಮುಂದೆ ಯುಧಿಷ್ಠಿರನಿಗೆ ಪಟ್ಟಾಭಿಷೇಕವಾಗುತ್ತದೆ. ಬಂಧುನಾಶದಿಂದ ಪರಿತಪಿಸುತ್ತಿದ್ದ ಯುಧಿಷ್ಠಿರನ ಇಚ್ಛೆಯ ಮೇರೆಗೆ ಅಶ್ವಮೇಧಯಾಗ ಮಾಡಲು ಅಶ್ವವನ್ನು ದಿಗ್ವಿಜಯಕ್ಕೆ ಕಳಿಸುತ್ತಾನೆ. ಅದರ ರಕ್ಷಣೆಗಾಗಿ ಸ್ವತ: ಅರ್ಜುನನೇ ೭೮ರ ವಯಸ್ಸಿನಲ್ಲಿ ಸೇನಾಸಮೇತನಾಗಿ ಎರಡನೇ ಸಲ ದಿಗ್ವಿಜಯಕ್ಕೆ ಹೊರಟನು. ಆ ಸಂದರ್ಭದಲ್ಲಿ ಮಗನಾದ ಬಬ್ರುವಾಹನನ ಕೈಯಲ್ಲಿ ಅರ್ಜುನ ಸೋತು ನೆಲಕ್ಕುರುಳಿದ. ನಂತರ ನಾಗಕನ್ಯೆ ಉಲೂಪಿಯ ಸಂಜೀವಿನಿ ಮಣಿಯಿಂದ ಮತ್ತೆ ಚೇತರಿಸಿಕೊಂಡು ಮುಂದೆ ಸಾಗಿ, ಭಾರತವನ್ನು ಸುತ್ತಿ ಅಶ್ವಮೇಧಯಾಗವನ್ನು ಪೂರ್ತಿಗೊಳಿಸಿದರು. ಇಲ್ಲಿಗೆ ಅರ್ಜುನ ಭೂಮಿಗೆ ಬಂದ ಉದ್ದೇಶ ಮುಗಿಯುತ್ತದೆ.

ಹೀಗೆ ಅರ್ಜುನನು ರಾಜ್ಯ ರಕ್ಷಣೆ, ಶತ್ರುಗಳ ವಿರುದ್ಧ ಹೋರಾಟ ಮಾಡುವುದಕ್ಕೆ ತನ್ನ ಜೀವನವನ್ನು ಮೀಸಲಿಟ್ಟನು. ಕೊನೆಗೆ ಪಾಂಡವರು ೩೬ ವರ್ಷಗಳ ಕಾಲ ರಾಜ್ಯವಾಳಿ, ಪರೀಕ್ಷಿತ್ ರಾಜನಿಗೆ ರಾಜ್ಯ ತ್ಯಾಗ ಮಾಡಿ, ದೇವತೆಗಳಾಗಿ ಸ್ವರ್ಗ ಸೇರಿದರು.